ದಿನಾಂಕಃ **28.03.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಆರ್. ವಕೀಲರಿಂದಃ

ಈ ದಾವೆಯನ್ನು ಸರ್ವೆ.ನಂಬರ್.135/1 ರಲ್ಲಿ 4 ಎಕರೆಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ಸದರಿ ಸ್ವತ್ತಿನ ಪಹಣಿಯನ್ನು ನೋಡಿರುತ್ತೇನೆ. ಸರ್ವೆ.ನಂಬರ್.135/1 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ವಾದಿಯ ತಾತನ ಹೆಸರು ಎನ್. ಗಂಗಪ್ಪ. ಎನ್. ಗಂಗಪ್ಪರವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಎನ್.ಗಂಗಪ್ಪರವರ ಹೆಸರಿಗೆ ಆಗಿರುವಂತಹ ಕ್ರಯಪತ್ರವನ್ನು ನಾನು ನೋಡಿರುತ್ತೇನೆ . ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಎನ್.ಗಂಗಪ್ಪರವರಿಗೆ 1974 ಮತ್ತು 1981 ರಲ್ಲಿ ಕ್ರಯಪತ್ರ ಆಗಿರುತ್ತದೆ ಎಂದು ನಮೂದು ಮಾಡಿಸಿರುತ್ತೇನೆ. 1974 ರ ಕ್ರಯಪತ್ರದಲ್ಲಿ ಗಂಗಪ್ಪ 2 ಎಕರೆ 10 ಗುಂಟೆ ಖರೀದಿ ಮಾಡಿರುತ್ತಾರೆ. ಸದರಿ ಜಮೀನನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1981 ರ ಕ್ರಯಪತ್ರದಲ್ಲಿ ಗಂಗಪ್ಪ ಯಾರಿಂದ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

2. ಸರ್ವೆ.ನಂಬರ್.135/1 ರ ಪಹಣಿಯಲ್ಲಿ ಎನ್.ಗಂಗಪ್ಪರವರ ಹೆಸರು ನಮೂದಾಗಿರುತ್ತದೆ ಆದರೆ 1 ನೇ ವಾದಿಯ ಹೆಸರು ನಮೂದಾಗಿರುವುದಿಲ್ಲ. ಎನ್.ಗಂಗಪ್ಪರವರ ಹೆಸರಿಗೆ 4 ಎಕರೆ 10 ಗುಂಟೆ ನಮೂದು ಮಾಡಿರುತ್ತಾರೆ. 4 ಎಕರೆ 10 ಗುಂಟೆ ಜಮೀನಿನ ಚೆಕ್ಕುಬಂದಿ ಗೊತ್ತಿರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಸದರಿ 4 ಎಕರೆ 10 ಗುಂಟೆಯಲ್ಲಿ 2 ಎಕರೆ 10 ಗುಂಟೆ ಒಂದು ಕಡೆ ಮತ್ತು 2 ಎಕರೆ ಇನ್ನೊಂದು ಕಡೆ ಇರುತ್ತದೆ ಎಂದು ಉತ್ತರಿಸುತ್ತಾರೆ. 2 ಎಕರೆ 10 ಗುಂಟೆ ಜಮೀನಿನ ಪೂರ್ವಕ್ಕೆ ಮೈಲ್ಗಾನ ತಿಪ್ಪಯ್ಯರವರ ಜಮೀನು, ಪಶ್ಚಿಮಕ್ಕೆ ಲಿಂಗಮ್ಮನ ಜಮೀನು, ಉತ್ತರಕ್ಕೆ ಈಡಿಗರ

ಗೋವಿಂದಪ್ಪನ ಜಮೀನು, ದಕ್ಷಿಣಕ್ಕೆ ನರಸಮ್ಮ ಅಲಿಯಾಸ್ ಗುಡ್ಡಮ್ಮ ಸದರಿ ನರಸಮ್ಮ ಅಲಿಯಾಸ್ ಗುಡ್ಡಮ್ಮ ನನ್ನ ಅಜ್ಜಿ 2 ಎಕರೆ ಜಮೀನಿನ ಪೂರ್ವಕ್ಕೆ ದಿಮ್ಮಲ ನರಸಿಂಹಯ್ಯನವರ ಜಮೀನು, ಪಶ್ಚಿಮಕ್ಕೆ ಎನ್.ಗಂಗಪ್ಪರವರ ಜಮೀನು, ಉತ್ತರಕ್ಕೆ ಈಡಿಗರ ಗೋವಿಂದಪ್ಪನ ಜಮೀನು, ದಕ್ಷಿಣಕ್ಕೆ ಗೊಂದಿಹಳ್ಳಿ ಗ್ರಾಮದ ಚಿಕ್ಕರಂಗಪ್ಪರವರ ಜಮೀನು ಇರುತ್ತದೆ. ನನ್ನ ಅಜ್ಜಿ ನರಸಮ್ಮ, ಈಡಿಗರ ಗೋವಿಂದಪ್ಪ, ಲಿಂಗಮ್ಮ ಜೀವಂತವಾಗಿ ಇರುವುದಿಲ್ಲ. ಪ್ರಸ್ತುತ ನಮ್ಮ ಅಜ್ಜಿಯ ಹೆಸರಿನಲ್ಲಿ ಇದ್ದ ಜಮೀನಿನ ಖಾತೆ ನನ್ನ ತಂದೆ ನರಸಿಂಹಯ್ಯನವರ ಹೆಸರಿನಲ್ಲಿ ಇರುತ್ತದೆ. ಲಿಂಗಮ್ಮನ ವಾರಸುದಾರರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಮೇಲೆ ಹೇಳಿರುವಂತಹ ಚೆಕ್ಕುಬಂದಿ ಸರಿಯಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

3. ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ವಾದಿಗಳು ನಮ್ಮ ಗ್ರಾಮದವರು ಆಗಿರುವ ಕಾರಣ ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ವಾದಿಗಳ ಹೇಳಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ